**ಭಾ**ರತದ ಮಹಿಳಾ ಕ್ರಿಕೆಟ್ ತಂಡವು ಲಾರ್ಡ್ಸ್‌ನಲ್ಲಿ ನಡೆದ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಸೋತಿರಬಹುದು. ಆದರೆ, ಈ ದೇಶದ ಮಹಿಳಾ ಸಮುದಾಯದಲ್ಲಿ ಮಿಥಾಲಿ ಬಳಗವು ಆತ್ಮವಿಶ್ವಾಸವನ್ನು ಉದ್ದೀಪನಗೊಳಿಸಿದ್ದು ಬಹುದೊಡ್ಡ ಗೆಲುವು.

ತಂಡದ ನಾಯಕಿ ಮಿಥಾಲಿ, ಅನುಭವಿ ಮಧ್ಯಮ ವೇಗಿ ಜೂಲನ್ ಗೋಸ್ವಾಮಿ, ಸ್ಪಿನ್ ಮೋಡಿಗಾತಿ ರಾಜೇಶ್ವರಿ ಗಾಯಕವಾಡ್, ಸಿಡಿಲಮರಿ ಹರ್ಮನ್‌ಪ್ರೀತ್ ಸಿಂಗ್, ಬ್ಯಾಟಿಂಗ್ ಪ್ರತಿಭೆ ವೇದಾ ಕೃಷ್ಣಮೂರ್ತಿ, ತಾಳ್ಮೆಯ ಬ್ಯಾಟ್ಸ್‌ವುಮನ್ ಪೂನಮ್ ರಾವುತ್ ಅವರು ಜೀವನದುದ್ದಕ್ಕೂ ಪಟ್ಟ ಕಷ್ಟಗಳು ಸಣ್ಣವಲ್ಲ. ಆದರೆ ಕಷ್ಟಕ್ಕೆ ಹೆದರಿ ಎಂದಿಗೂ ಹಿಂದೆ ಸರಿದವರಲ್ಲ.

## ಗೆಜ್ಜೆ ಸದ್ದಿಗೆ ಮರುಳಾಗಿದ್ದರೆ..?

25 ವರ್ಷಗಳ ಹಿಂದೆ ಮಿಥಾಲಿ ರಾಜ್ ಕಾಲ್ಗೆಜ್ಜೆಯ ಝೇಂಕಾರಕ್ಕೆ ಮರುಳಾಗಿ ಹೋಗಿದ್ದರೆ ಭಾರತದ ಕ್ರಿಕೆಟ್ ದೊಡ್ಡ ನಷ್ಟ ಅನುಭವಿಸುತ್ತಿತ್ತು.

ಮಿಥಾಲಿ ಅವರು ಬಾಲ್ಯದಲ್ಲಿ ಶಾಸ್ತ್ರೀಯ ನೃತ್ಯ ಅಭ್ಯಾಸ ಮಾಡಿದ್ದರು. ಕಲಾಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡುವ ಪ್ರತಿಭೆಯೂ ಇತ್ತು. ಆದರೆ ಕಾಲ್ಗೆಜ್ಜೆ ತೆಗೆದಿಟ್ಟು ಕ್ರಿಕೆಟ್ ಪ್ಯಾಡ್ ಕಟ್ಟಿಕೊಂಡು ಅಂಗಳಕ್ಕೆ ಬಂದ ಮಿಥಾಲಿ ಈಗ ಮಹಿಳಾ ಕ್ರಿಕೆಟ್‌ನ ದಿಗ್ಗಜ ಆಟಗಾರ್ತಿಯಾಗಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿರುವ (6000) ಆಟಗಾರ್ತಿ. ಅಲ್ಲದೇ ವಿಶ್ವ ತಂಡದ ನಾಯಕಿಯ ಗೌರವಕ್ಕೂ ಪಾತ್ರರಾಗಿದ್ದಾರೆ.

ಆದರೆ, 18 ವರ್ಷಗಳಿಂದ ಭಾರತ ತಂಡದ ಆಟಗಾರ್ತಿಯಾಗಿರುವ ಅವರಿಗೆ ವಿಶ್ವಕಪ್ ಗೆಲ್ಲುವ ಕನಸು ಈ ಬಾರಿಯೂ ಈಡೇರಲಿಲ್ಲ. 2005ರಲ್ಲಿ ಭಾರತ ತಂಡವು 'ರನ್ನರ್ ಅಪ್' ಆದಾಗಲೂ ಅವರು ತಂಡದಲ್ಲಿದ್ದರು. ಆದರೆ ಈ ಬಾರಿ ಅವರು ನಾಯಕಿಯಾಗಿದ್ದರು. ತಂಡವನ್ನು ಫೈನಲ್‌ವರೆಗೆ ಮುನ್ನಡೆಸಿದ ಅವರ ನಾಯಕತ್ವ ಬಹುಕಾಲ ನೆನಪಿನಲ್ಲಿ ಉಳಿಯುವಂತದ್ದು. ಡರ್ಬಿಯಲ್ಲಿ ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ಅವರು ಬಾರಿಸಿದ್ದ ಆಕರ್ಷಕ ಶತಕದ ಬಲದಿಂದ ತಂಡಕ್ಕೆ ಗೆಲುವು ಸಾಧ್ಯವಾಗಿತ್ತು. ಟೂರ್ನಿಯಲ್ಲಿ ಒಟ್ಟು 409 ರನ್‌ಗಳನ್ನು ಗಳಿಸಿದ್ದಾರೆ. ಬೌಲರ್‌ಗಳನ್ನು ಕಣಕ್ಕಿಳಿಸಿದ ರೀತಿ, ಬ್ಯಾಟಿಂಗ್ ಕ್ರಮಾಂಕ ಮತ್ತು ಫೀಲ್ಡಿಂಗ್ ಯೋಜನೆಗಳನ್ನು ಅವರು ನಿರ್ವಹಿಸಿದ ರೀತಿಯು ಅಮೋಘವಾಗಿತ್ತು. ಮುಂದಿನ ಪೀಳಿಗೆಯ ನಾಯಕಿಯರು ಹೇಗಿರಬೇಕು ಎಂಬ ಮಾದರಿಯನ್ನು 34 ವರ್ಷದ ಮಿಥಾಲಿ ತೋರಿಸಿಕೊಟ್ಟಿದ್ದಾರೆ.

## ಗೋಸ್ವಾಮಿ ಪರಿಪಕ್ವ ಬೌಲರ್

'ಕೋಲ್ಕತ್ತ ಎಕ್ಸ್‌ಪ್ರೆಸ್' ಜೂಲನ್ ಗೋಸ್ವಾಮಿ ಅವರಿಗೆ ಇದು ಬಹುತೇಕ ಕೊನೆಯ ವಿಶ್ವಕಪ್ ಟೂರ್ನಿ. ಕ್ರಿಕೆಟ್‌ನಲ್ಲಿ ಬೌಲರ್ ಆಗುವ ಕನಸು ಕಾಣುತ್ತಿರುವ ಹುಡುಗಿಯರಿಗೆ ಮಾದರಿಯಾಗಿರುವ ಆಟಗಾರ್ತಿ. 2002ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಜೂಲನ್ ಇದುವರೆಗೂ ತಂಡದ ಬೌಲಿಂಗ್ ಸಾರಥ್ಯದ ಹೊಣೆ ಹೊತ್ತಿದ್ದಾರೆ. ತಮಗಿಂತ ಕಿರಿಯ ಆಟಗಾರ್ತಿಯರೊಂದಿಗೆ ಜೂಲನ್ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಿದ್ದಾರೆ.

ವಿಶ್ವ ಏಕದಿನ ಮಹಿಳಾ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಬೌಲರ್ (195) ದಾಖಲೆಯೂ ಇವರ ಹೆಸರಿನಲ್ಲಿದೆ. ಇನ್ನೈದು ವಿಕೆಟ್ ಗಳಿಸಿಬಿಟ್ಟರೆ ವಿಕೆಟ್ ದ್ವಿಶತಕ ಸಾಧಿಸಿದ ಮೊದಲ ಆಟಗಾರ್ತಿಯ ಗೌರವ ಕೂಡ ಇವರದ್ದಾಗಲಿದೆ. ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಅವರ ಅಮೋಘ (23ಕ್ಕೆ3) ಬೌಲಿಂಗ್ ಗಮನ ಸೆಳೆದಿತ್ತು. ಬಲಿಷ್ಠ ಇಂಗ್ಲೆಂಡ್ ತಂಡವನ್ನು 229 ರನ್‌ಗಳಿಗೆ ನಿಯಂತ್ರಿಸಿದ್ದರು.

ಹದಿನೈದು ವರ್ಷಗಳಿಂದ ದೈಹಿಕ ಕ್ಷಮತೆ ಕಾಪಾಡಿಕೊಂಡು ಬಂದಿರುವ ಅವರ ಬೌಲಿಂಗ್ ಕೌಶಲಗಳೂ ಪರಿಪಕ್ವಗೊಂಡಿವೆ. ಭಾರತ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾದ ಪಿಚ್‌ಗಳಲ್ಲಿಯೂ ಯಶಸ್ಸು ಸಾಧಿಸಿದ ಛಲಗಾತಿ ಜೂಲನ್. ಬಾಲ್ಯದಲ್ಲಿ ಟೆನಿಸ್ ಚೆಂಡಿನಲ್ಲಿ ನಿಧಾನಗತಿಯ ಬೌಲಿಂಗ್ ಮಾಡುತ್ತಿದ್ದ ಜೂಲನ್ ಅವರನ್ನು ಹುಡುಗರು ವ್ಯಂಗ್ಯವಾಡುತ್ತಿದ್ದರು. ಕುಟುಂಬದ ಸದಸ್ಯರು ಕ್ರಿಕೆಟ್ ಬೇಡ ಚೆನ್ನಾಗಿ ಓದು ಎಂದಿದ್ದರು. ಆದರೆ ಇವತ್ತು ಅವರೆಲ್ಲ ಜೂಲನ್‌ಗೆ ಅಭಿಮಾನಿಗಳಾಗಿದ್ದಾರೆ.

## ಗುಮ್ಮಟನಗರಿಯ ಹುಡುಗಿ

ವಿಜಯಪುರದ ಮಧ್ಯಮವರ್ಗದ ಕುಟುಂಬದ ಹುಡುಗಿ ರಾಜೇಶ್ವರಿ ಗಾಯಕವಾಡ್ ಈ ಬಾರಿ ಎರಡು ಕಾರಣಗಳಿಗೆ ಪ್ರಸಿದ್ಧಿಯಾದರು.

ವಿಶ್ವಕಪ್ ಲೀಗ್ ಹಂತದಲ್ಲಿ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಐದು ವಿಕೆಟ್ ಕಬಳಿಸಿದಾಗ ವಿಶ್ವಶ್ರೇಷ್ಠ ಸ್ಪಿನ್ನರ್‌ಗಳೂ ಅಭಿನಂದನೆಗಳ ಮಳೆ ಸುರಿಸಿದರು. ಗುಮ್ಮಟನಗರಿಯ ಎಡಗೈ ಸ್ಪಿನ್ನರ್ ರಾಜೇಶ್ವರಿ ಹೆಸರು ಎಲ್ಲೆಲ್ಲೂ ಪ್ರತಿಧ್ವನಿಸಿತು. ಅದೇ ಪಂದ್ಯದ ನಂತರ ಟಿ.ವಿ..ಗೆ ಸಂದರ್ಶನ

(42ನೇ ಪುಟ ನೋಡಿ)

